# ‘ಮನಿ’ ಮೇವೆದರ್

ಕಳೆದ ವಾರವಿಡೀ ಫ್ಲಾಯ್ಡ್ ಮೇವೆದರ್‌ನದ್ದೇ ಸುದ್ದಿ. ಲಾಸ್ ವೇಗಾಸ್‌ನಲ್ಲಿ ನಡೆದ, ಜಗತ್ತಿನಾದ್ಯಂತ ಭಾರೀ ಕದನ ಕುತೂಹಲ ಕೆರಳಿಸಿದ್ದ ಬಾಕ್ಸಿಂಗ್ ಪಂದ್ಯದಲ್ಲಿ 40ರ ಹರೆಯದ ಮೇವೆದರ್, 29ರ ಹರೆಯದ ಕೊನವ್ ಮ್ಯಾಕ್ ಗ್ರೆಗರ್ ನನ್ನು ಹತ್ತನೇ ರೌಂಡ್‌ನಲ್ಲಿ ಹಗ್ಗದ ಮೇಲೆ ಹೊಡೆದುರುಳಿಸಿದ. ಈವರೆಗೆ ಎದುರಿಸಿದ 50 ಬಾಕ್ಸಿಂಗ್ ಪಂದ್ಯಗಳಲ್ಲಿ ಎಲ್ಲವನ್ನೂ ಗೆಲ್ಲುವ ಮೂಲಕ 50–0 ವಿಜಯ ದಾಖಲಿಸಿದ ವಿಶ್ವದ ಏಕೈಕ ವೃತ್ತಿಪರ ಬಾಕ್ಸರ್ ಎಂದು ಮೇವೆದರ್ ಇತಿಹಾಸದಲ್ಲಿ ದಾಖಲಾದ. ಈ ಪಂದ್ಯ ‘ವಿಶ್ವದ ಅತಿದೊಡ್ಡ ಹಣದ ಮೊತ್ತದ ಬಾಕ್ಸಿಂಗ್ ಪಂದ್ಯ.’ ಕಳೆದೆರಡು ವರ್ಷಗಳಿಂದ ವಿಶ್ವದ ಅತ್ಯಂತ ಶ್ರೀಮಂತ ಬಾಕ್ಸರ್ ಆಗಿ ಹಲವು ಟೂರ್ನಿಗಳಲ್ಲಿ ಗೆದ್ದಿರುವ ಎದುರಾಳಿ ಮ್ಯಾಕ್, ಫೆದರ್‌ವೈಟ್ ಮತ್ತು ಲೈಟ್‌ವೈಟ್ ವಿಭಾಗಗಳಲ್ಲಿ ವಿಶ್ವ ಚಾಂಪಿಯನ್ ಆಗಿರುವಾತ. ಆತನನ್ನು ಸೋಲಿಸಿದ ಒಂದೇ ಪಂದ್ಯದಿಂದ ಮೇವೆದರ್ ಗೆದ್ದ ಬಹುಮಾನದ ಮೊತ್ತ 100 ದಶಲಕ್ಷ ಡಾಲರ್. ಜತೆಗೆ ಪ್ರತಿ ವೀಕ್ಷಣೆಯ ಲಾಭಗಳಿಕೆ ಮತ್ತು ಗೇಟ್ ಕಲೆಕ್ಷನ್ ನಲ್ಲಿ ಮೇವೆದರ್‌ಗೆ ದೊರೆಯಲಿರುವ ಪಾಲು ಸುಮಾರು 400 ದಶಲಕ್ಷ ಡಾಲರ್!

ಈ ಪಂದ್ಯ ಗೆದ್ದ ಬಳಿಕ ವೃತ್ತಿಪರ ಬಾಕ್ಸಿಂಗ್ ಕಣದಿಂದ ನಿವೃತ್ತಿ ಹೊಂದಿರುವುದಾಗಿ ಮೇವೆದರ್ ಘೋಷಿಸಿದ್ದಾನೆ. ತಮಾಷೆಯ ಸಂಗತಿ ಎಂದರೆ, ಇದು ಮೇವೆದರ್ ಘೋಷಿಸುತ್ತಿರುವ ಮೂರನೇ ನಿವೃತ್ತಿ! ಹತ್ತು ವರ್ಷಗಳ ಹಿಂದೆ 2007ರ ಡಿಸೆಂಬರ್‌ನಲ್ಲಿ ರಿಕೆ ಹಾಟನ್ ವಿರುದ್ಧ ಗೆದ್ದ ಬಳಿಕ ಮೇವೆದರ್ ಮೊದಲ ನಿವೃತ್ತಿ ಘೋಷಿಸಿದ್ದ. ಅನಂತರ 21 ತಿಂಗಳ ಕಾಲ ಬಾಕ್ಸಿಂಗ್ ಕಣಕ್ಕೆ ಇಳಿಯಲಿಲ್ಲ. ಆದರೆ 2009ರಲ್ಲಿ ಜುವಾನ್ ಮಾರ್ಕ್ವೆಜ್‌ನ ಹೋರಾಟದ ಸವಾಲು ಬಂದಾಗ ಅದನ್ನು ಸ್ವೀಕರಿಸಿದ ಮೇವೆದರ್ ಮತ್ತೆ ಕಣಕ್ಕಿಳಿದು ಆತನನ್ನು ಹೊಡೆದುರುಳಿಸಿದ. ಆ ವಿಜಯದ ಬಳಿಕವೂ ನಿವೃತ್ತಿ ಘೋಷಿಸಿದ. ಬಳಿಕ ಏಳು ವರ್ಷ ಮೇವೆದರ್ ಕಣದಲ್ಲಿ ಕಾಣಿಸಿಕೊಳ್ಳಲಿಲ್ಲ.

ಆದರೆ ಬೆಟ್ಟಿಂಗ್ ಬಕಾಸುರರು ಮತ್ತು ಬಾಕ್ಸಿಂಗ್ ಏಜೆಂಟರು ಸುಮ್ಮನಿರಬೇಕಲ್ಲ. ಜಗತ್ತಿನಾದ್ಯಂತ ಬಾಕ್ಸಿಂಗ್ ಪ್ರಿಯರನ್ನು ಹುಚ್ಚೆಬ್ಬಿಸುವ ಪಂದ್ಯವೊಂದು ಅವರಿಗೆ ತುರ್ತಾಗಿ ಬೇಕಾಗಿತ್ತು. 49 ಪಂದ್ಯಗಳಲ್ಲಿ ಗೆದ್ದು ಈ ಹಿಂದೆ ರಾಕಿ ಮರ್ಸಿಯಾನೊ ಎಂಬ ಬಾಕ್ಸಿಂಗ್ ಪಟುವಿನ ದಾಖಲೆ ಸರಿಗಟ್ಟಿದ್ದ ಮೇವೆದರ್‌ನನ್ನು ಮತ್ತೆ ಕಣಕ್ಕೆ ಕರೆದರು. ಆತ ಒಪ್ಪಲಿಲ್ಲ. ಒತ್ತಡ ಹೆಚ್ಚಾದಾಗ ಒಂದೇ ಮಾತು ಹೇಳಿದ: ಮ್ಯಾಕ್‌ಗ್ರೆಗರ್ ನನ್ನು ಕಣಕ್ಕೆ ಇಳಿಸಿದರೆ ನಾನು ಸಿದ್ಧ! ಬೆಟ್ಟಿಂಗ್ ಜಾಲ ಮ್ಯಾಕ್‌ನನ್ನು ಒಪ್ಪಿಸಲು ತಡ ಮಾಡಲಿಲ್ಲ.



29ರ ಹರೆಯದ ಆಕ್ರಮಣಕಾರಿ ಬಾಕ್ಸರ್ ಮ್ಯಾಕ್ ವಿರುದ್ಧ , 40ರ ಹರೆಯದ ಅನುಭವಿ ಮೇವೆದರ್ ಸೆಣಸನ್ನು ನೋಡಲು 43 ಸಾವಿರ ಜನ ಸೇರಿದ್ದರು. 13 ಗಂಟೆಗಳ ಕಾಲ ಕ್ಯೂ ನಲ್ಲಿ ನಿಂತು ಟಿಕೆಟ್ ಖರೀದಿಸಿದ್ದರು. ಸೆಲೆಬ್ರಿಟಿಗಳು ಭಾರೀ ಮೊತ್ತ ಕೊಟ್ಟು ಸೀಟು ರಿಸರ್ವ್ ಮಾಡಿದ್ದರು. ಬೆಟಿಂಗ್ ಮಳಿಗೆಗಳಲ್ಲಿ ಕೋಟ್ಯಂತರ ಡಾಲರ್ ಕೈಬದಲಾಯಿಸಿದವು.

ಪಂದ್ಯ ಆರಂಭದಲ್ಲಿ ಮ್ಯಾಕ್ ಮೇಲುಗೈ. ಮ್ಯಾಕ್ ಪದೇ ಪದೇ ಮುನ್ನುಗ್ಗಿ ಪಂಚ್‌ಗಳನ್ನು ಬೀಸಿದರೆ, ಮೇವೆದರ್ ತಾಳ್ಮೆಯಿಂದ ಹಗ್ಗದ ಬಳಿಯಲ್ಲೇ ಓಡಾಡಿ ಏಟುಗಳನ್ನು ತಪ್ಪಿಸಿಕೊಳ್ಳುತ್ತಿದ್ದ. ಮೊದಲ ಮೂರು ರೌಂಡ್‌ಗಳಲ್ಲಿ ಮ್ಯಾಕ್ ಒಟ್ಟು ಬೀಸಿದ್ದು 115 ಪಂಚ್‌ಗಳನ್ನು. ಅದರಲ್ಲಿ 26 ಏಟುಗಳು ಮೇವೆದರ್‌ಗೆ ಬಿದ್ದಿವೆ. ಅದೇ ವೇಳೆ ಮೇವೆದರ್ ಹಿಂತಿರುಗಿಸಿದ್ದು 28 ಪಂಚ್‌ಗಳನ್ನು ಮಾತ್ರ. ಅದರಲ್ಲಿ 12 ಪಂಚ್‌ಗಳು ಮಾತ್ರ ಮ್ಯಾಕ್‌ಗೆ ಬಿದ್ದಿವೆ.

ಮ್ಯಾಕ್ ಅಭಿಮಾನಿಗಳು ಮೈಮರೆತಿರುವಾಗಲೇ ಮೇವೆದರ್ ದಾಳಿ ಶುರು ಮಾಡಿದ. 4ನೇ ರೌಂಡ್‌ನಲ್ಲಿ 31 ಪಂಚ್‌ಗಳನ್ನು ಪ್ರಯೋಗಿಸಿದ. ಅದಾಗಲೇ ಅಗತ್ಯಕ್ಕಿಂತ ಹೆಚ್ಚು ಸಲ ಕೈಗಳನ್ನು ಬೀಸಿ ಮ್ಯಾಕ್ ಸುಸ್ತಾಗತೊಡಗಿದ್ದ. 9ನೇ ರೌಂಡ್‌ನಲ್ಲಿ ಮೇವೆದರ್ ಬರೋಬ್ಬರಿ 68 ಪಂಚ್‌ಗಳನ್ನು ಬೀಸಿದ. ಅದರಲ್ಲಿ ಒಂದಂತೂ ಮ್ಯಾಕ್‌ನ ದವಡೆಯನ್ನು ನುಜ್ಜುಗುಜ್ಜಾಗಿಸಿತು. 10 ನೇ ರೌಂಡ್‌ನಲ್ಲಿ ಮೇವೆದರ್‌ನ ಹೊಡೆತಕ್ಕೆ ಮ್ಯಾಕ್ ಹಗ್ಗದ ಮೇಲುರುಳಿದ. ಮೇವೆದರ್ ಸತತವಾಗಿ ಚಚ್ಚತೊಡಗಿದಾಗ ರೆಫರಿ ಪಂದ್ಯ ನಿಲ್ಲಿಸಿ, ವಿಜಯ ಘೋಷಿಸಿದ. ಬಾಕ್ಸಿಂಗ್ ಕಣದಲ್ಲಿ ಯೌವನದ ಬಿಸಿರಕ್ತದ ಹಾರಾಟಕ್ಕಿಂತ, ಲೆಕ್ಕಾಚಾರದ ಶಕ್ತಿ ಬಳಕೆಯೇ ಗೆಲ್ಲುತ್ತದೆ ಎನ್ನುವುದು ಸಾಬೀತಾಯಿತು.

ಈತನ ಅಪ್ಪನ ಹೆಸರು ಫ್ಲಾಯ್ಡ್ ಮೇವೆದರ್ ಸೀನಿಯರ್. ಈತ ಜೂನಿಯರ್. ಈತನಿಗೆ ಇನ್ನೂ ಸಬ್‌ಜೂನಿಯರ್ ಆಗಿದ್ದಾಗಲೇ ಜೂಜು ಹುಚ್ಚು. ಬಾಲ್ಯದಲ್ಲೇ ಸಹಪಾಠಿಗಳ ಜತೆಗೆ ಬೆಟ್ ಕಟ್ಟಿ ಡಿನ್ನರ್, ಲಂಚ್ ಪಾರ್ಟಿಗಳನ್ನು ಗೆಲ್ಲುತ್ತಿದ್ದ. ಕ್ಯಾಂಡಿ ಬಾರ್, ಚಿಪ್ಸ್ ಪ್ಯಾಕೆಟ್‌ಗಳನ್ನು ಸೋಲುತ್ತಿದ್ದ. 16ರ ಹರೆಯದಲ್ಲಿ ಗೋಲ್ಡನ್ ಗ್ಲೋಬ್ಸ್ ಚಾಂಪಿಯನ್‌ಶಿಪ್ ಗೆದ್ದ. 1996ರ ಅಟ್ಲಾಂಟಾ ಒಲಿಂಪಿಕ್ಸ್‌ನ ಫೆದರ್‌ವೈಟ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದ. ವೃತ್ತಿಪರ ಬಾಕ್ಸಿಂಗ್‌ನಲ್ಲಿ ಮೇವೆದರ್ ಒಂದೊಂದಾಗಿ ಗೆಲುವನ್ನು ದಾಖಲಿಸಿದ. ವಿವಿಧ ತೂಕ ಸಾಮರ್ಥ್ಯದ ಐದೂ ವಿಭಾಗಗಳಲ್ಲಿ ವಿಶ್ವ ಚಾಂಪಿಯನ್ ಆದ. ಒಟ್ಟು 15 ಪ್ರಶಸ್ತಿ ಬೆಲ್ಟ್‌ಗಳನ್ನು ಹೆಗಲಿಗೇರಿಸಿಕೊಂಡ.

ಈತನಿಗೆ ‘ಮನಿ ಮೇವೆದರ್’ ಎಂದೇ ಹೆಸರು. ಫ್ಯಾಷನ್, ಮ್ಯೂಸಿಕ್, ಮನರಂಜನೆ ಉದ್ಯಮಗಳ ಮೇಲೆ ಭಾರೀ ಹಣ ಹೂಡಿದ. 2012ರಿಂದ 2014ರವರೆಗೆ ‘ಜಗತ್ತಿನ ಅತ್ಯಂತ ಶ್ರೀಮಂತ ಕ್ರೀಡಾಳು’ ಎನ್ನಿಸಿಕೊಂಡ. ಫೋರ್ಬ್ಸ್ ನ ‘40 ವರ್ಷದೊಳಗಿನ ಶ್ರೀಮಂತ ಉದ್ಯಮಿ’ಗಳ ಪಟ್ಟಿಯಲ್ಲಿ ಈತನಿಗೆ 34ನೇ ಸ್ಥಾನವಿತ್ತು.

ಈತ ಎಂತಹ ಜೂಜುಕೋರನೆಂದರೆ ಮೊನ್ನೆ ಮ್ಯಾಕ್ ವಿರುದ್ಧ ನಡೆದ ಪಂದ್ಯಕ್ಕೆ ಮುನ್ನ ತನ್ನ ಮೇಲೆಯೇ ತಾನು 4 ಲಕ್ಷ ಡಾಲರ್ ಬೆಟ್ಟಿಂಗ್ ಕಟ್ಟಲು ಯತ್ನಿಸಿದ್ದ. ಅಧಿಕಾರಿಗಳು ಅವಕಾಶ ಕೊಡಲಿಲ್ಲ. ಕಳೆದ 22 ವರ್ಷಗಳಲ್ಲಿ ಕೋಟ್ಯಂತರ ಡಾಲರ್ ದುಡಿದರೂ ಜೂಜಿನಲ್ಲಿ ಕಳೆದುಕೊಂಡದ್ದೇ ಹೆಚ್ಚು. ಹಲವರಿಗೆ ಕೋಟ್ಯಂತರ ಡಾಲರ್ ಸಾಲ ಬಾಕಿ; 60 ಲಕ್ಷ ಡಾಲರ್ ತೆರಿಗೆ ಬಾಕಿ! ಪ್ರತಿ ವರ್ಷ ಅಂದಾಜು 750 ಲಕ್ಷ ಡಾಲರ್ ಖರ್ಚು ಮಾಡುತ್ತಿದ್ದ. ಈಗ ಈತನ ಜಾಹೀರಾತು ಮೌಲ್ಯವೂ ಏರಿಕೆಯಾಗಿದೆ. ‘ಈ ಸಲದ ನಿವೃತ್ತಿ ಅಂತಿಮ’ ಎಂದಿದ್ದಾನೆ. ಆದರೆ ಬಾಕ್ಸಿಂಗ್‌ಪ್ರಿಯರು ನಂಬುತ್ತಿಲ್ಲ! ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65